**ದಿನಾಂಕಃ 24/07/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ವಾದಿ ಪರ ಶ್ರೀ. ಜಿ ಸಿ ಜಿ ವಕೀಲರಿಂದಃ**

1. ನಾನು ಪಿ ಯು ಸಿ ವರೆಗೆ ವಿದ್ಯಾ ಭಾಸ ಮಾಡಿದ್ದೇನೆ. ನನ್ನ ಮಕ್ಕಳ ಪೈಕಿ ಒಬ್ಬರು ಪಧವೀಧರರು ಇನ್ನೊಬ್ಬರು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭಾಸ ಮಾಡಿದ್ದಾರೆ. ನಾನು ಈ ದಾವೆ ಹೂಡುವಾಗ ಹುಣಸೆಕುಪ್ಪೆ ಗ್ರಾಮದಲ್ಲಿ ವಾಸಿಸುತ್ತಿದ್ದೆ. 2, 3 ಮತ್ತು 6 ನೇ ಪ್ರತಿವಾದಿಗಳು ಹುಣಸೆಕುಪ್ಪೆ ಗ್ರಾಮಸ್ದರು. ಇತರೇ ಪ್ರತಿವಾದಿಗಳು ಹುಣಸೆಕುಪ್ಪೆ ಗ್ರಾಮಸ್ಥರು ಎಂದರೆ ಗೊತ್ತಿಲ್ಲ. 4 ನೇ ಪ್ರತಿವಾದಿಯ ಗಂಡ ನಟರಾಜ ಗೊತ್ತಿಲ್ಲ. ನಾನು ಕಳೆದ 75 ವರುಷಗಳಿಂದಲೂ ಹುಣಸೆಕುಪ್ಪೆ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ನಾನು ಸದರಿ ಗ್ರಾಮದಲ್ಲಿ 2 ಬಾರಿ ಪಂಚಾಯಿತಿ ಚುನಾವಣೆಯಲ್ಲಿ ಗೆದ್ದಿದ್ದೆ. ನಾನು ಪಂಚಾಯಿತಿ ಪ್ರಧಾನ ನಾಗಿದ್ದರಿಂದ ಎಲ್ಲಾ ಗ್ರಾಮಸ್ಥರ ಪರಿಚಯ ಇದೆ ಎಂದರೆ ಸರಿಯಲ್ಲ.

2. ನನಗೆ ಸ್ವತ್ತನ್ನು ಖರೀದಿಸುವಾಗ ಯಾವ ದಾಖಲೆಗಳನ್ನು ಪರಿಶೀಲಿಸಬೇಕು ಎಂದು ಗೊತ್ತಿದೆ. ದಾವಾ ಸ್ವತ್ತಿನ ಮೂಲ ದಾಖಲಾತಿಗಳು ಜವರೇಗೌಡರ ಹೆಸರಿನಲ್ಲಿದೆ. ಜವರೇಗೌಡರ ಹೆಂಡತಿಯ ಹೆಸರು ಪುಟ್ಟಮ್ಮ. ಪುಟ್ಟಮ್ಮನ ತಾಯಿಯ ಹೆಸರು ಅಕ್ಕಯ್ಯಮ್ಮ ಎಂದರೆ ಗೊತ್ತಿಲ್ಲ. ಪುಟ್ಟಮ್ಮ ಹುಟ್ಟಿದಾಗಿನಿಂದಲೂ ಹುಣಸೆಕುಪ್ಪೆ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಪುಟ್ಟಮ್ಮನ ಸಹೋದರ, ಸಹೋದರಿಯರ ಬಗ್ಗೆ ಗೊತ್ತಿಲ್ಲ. ಅವರ ತಂದೆಯ ಹೆಸರು ಗೊತ್ತಿಲ್ಲ. ಜವರೇಗೌಡರನ್ನು ಪುಟ್ಟಮ್ಮನವರು ಎಷ್ಟು ವರುಷಗಳ ಹಿಂದೆ ಮದುವೆ ಆದರು ಎಂದು ಗೊತ್ತಿಲ್ಲ. ಪುಟ್ಟಮ್ಮ ನವರು ನಮ್ಮ ಗ್ರಾಮದಲ್ಲಿ ಎಷ್ಟು ವರುಷಗಳಿಂದ ಮತ ಚಲಾವಣೆ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ. ಪುಟ್ಟಮ್ಮ ತೀರಿಕೊಂಡು ಸುಮಾರು 4-5 ವರುಷ ಆಗಿರಬಹುದು. ಅಕ್ಕಯ್ಯಮ್ಮ ರವರ ಗಂಡನ ಹೆಸರು ಗೊತ್ತಿಲ್ಲ. ಅಕ್ಕಯ್ಯಮ್ಮ ರವರಿಗೆ ಪುಟ್ಟಮ್ಮ ಎಂಬ ಏಕೈಕ ಪುತ್ರಿ ಎಂದರೆ ನನಗೆ ಗೊತ್ತಿಲ್ಲ.

3. ಜವರೇಗೌಡರಿಗೆ ದಾವಾ ಸ್ವತ್ತಿನ ಮಾಲೀಕತ್ವ ಹೇಗೆ ಬಂತು ಎಂದು ಗೊತ್ತಿಲ್ಲ, ಆದರೆ ಅವರ ಸ್ವಂತ ಸ್ವತ್ತು. 40 ವರುಷಗಳ ಇಸಿ, ಆರ್.ಟಿ.ಸಿ., ಎಂ ಆರ್ ನೋಡಿದಾಗ ದಾವಾ ಸ್ವತ್ತು ಜವರೇಗೌಡರ ಸ್ವಂತ ಸ್ವತ್ತು ಎಂದು ಗೊತ್ತಾಯಿತು. ಸದರಿ ದಾಖಲೆಗಳ ಮುಖಾಂತರ ಯಾವ ಮೂಲದಿಂದ ಅವರ ಹೆಸರಿಗೆ ಸ್ವಂತ ಸ್ವತ್ತು ಎಂದು ಗೊತ್ತಾಯಿತು ಎಂದರೆ ಸಾಕ್ಷಿಯು ಈಗ ಹೇಳಿದ ದಾಖಲೆಗಳನ್ನು ಪರಿಶೀಲಿಸಿದಾಗ ಸ್ವಂತ ಸ್ವತ್ತು ಎಂದು ಗೊತ್ತಾಯಿತು ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಜವರೇಗೌಡರ ಸ್ವಂತ ಸ್ವತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಅಕ್ಕಯ್ಯಮ್ಮ ಬಿನ ಸಣ್ಣೇಗೌಡ ಎಂದು ಇದೆ ಎಂದರೆ ಸರಿ. ದಾವಾ ಸ್ವತ್ತು ಅಕ್ಕಯ್ಯಮ್ಮ ನವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಅಕ್ಕಯ್ಯಮ್ಮ ನವರಿಗೆ ಗಂಡು ಮಕ್ಕಳು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಜವರೇಗೌಡರನ್ನು ಪುಟ್ಟಮ್ಮ ನವರೊಂದಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ.

4. ಪುಟ್ಟಮ್ಮ ಮತ್ತು ಜವರೇಗೌಡರಿಗೆ ನಂಜೇಗೌಡ ಮತ್ತು ಸರೋಜಮ್ಮ ಎಂಬ ಇಬ್ಬರು ಮಕ್ಕಳು. ಅವರಿಗೆ ದೇವಮ್ಮ, ಸಾಕಮ್ಮ ಮತ್ತು ಲಕ್ಷ್ಮಮ್ಮ ಎಂಬ ಮಕ್ಕಳು ಸಹ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಮುಂದುವರೆದು, ಅವರ ಪರಿಚಯವೇ ಇಲ್ಲ ಎಂದು ನುಡಿಯುತ್ತಾರೆ. ನಿಪಿ-6 ರಲ್ಲಿ ದೇವಮ್ಮ ತಂದೆಯ ಹೆಸರು ಜವರೇಗೌಡ ಎಂದು ಇದೆ ಎಂದರೆ ನನಗೆ ಗೊತ್ತಿಲ್ಲ. ದೇವಮ್ಮ ಜವರೇಗೌಡರ ಮಗಳಾಗಿದ್ದರೂ ಸಹ ದಾವಾ ಸ್ವತ್ತನ್ನು ಕಬಳಿಸಲು ಮಗಳಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹುಣಸೆಕುಪ್ಪೆ ಗ್ರಾಮದಲ್ಲಿ ಜವರೇಗೌಡರ ಮಗಳು ದೇವಮ್ಮ ಎಂಬುವವರು ಇತರರು ಇದ್ದಾರೆ ಎಂದು ತೋರಿಸುವ ದಾಖಲಾತಿ ಇಲ್ಲ. ವಾದಿ ದಿಃ 01.06.1957 ರಂದು ಜನಿಸಿದ್ದು, ಅವರು ಹುಣಸೆಕುಪ್ಪೆಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಯೊಂದಿಗೆ ಸಾಕಮ್ಮ ಮತ್ತು ಲಕ್ಷ್ಮಮ್ಮ ನವರು ಸಹ ಹುಣಸೆಕುಪ್ಪೆಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು 4 ಹಾಗೂ 5 ನೇ ಪ್ರತಿವಾದಿಗಳು

ಪುಟ್ಟಮ್ಮ ಮತ್ತು ಜವರೇಗೌಡರ ಮಕ್ಕಳು ಆದರೂ ಸಹ ಅವರು ಯಾರೆಂದು ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ದಾವಾ ಸ್ವತ್ತು 1975-76 ರಿಂದ 2001 ರವರೆಗೆ ಕೈ ಬರಹದ ಆರ್.ಟಿ.ಸಿ. ಗಳಲ್ಲಿ ಅಕ್ಕಯ್ಯಮ್ಮ ಬಿನ್ ಸಣ್ಣೇಗೌಡ ಎಂದು ನಮೂದಿದೆ ಎಂದರೆ ಗೊತ್ತಿಲ್ಲ. ನಿಪಿ-9 ರಲ್ಲಿ ಅಕ್ಕಯ್ಯಮ್ಮ ಬಿನ್ ಸಣ್ಣೇಗೌಡ ಎಂದು ನಮೂದಿದೆ ಎಂದರೆ ಇದೆ.

6. ಜವರೇಗೌಡರವರು 2021 ನೇ ಸಾಲಿನಲ್ಲಿ ಮರಣಗೊಂಡರು. ದಾವಾ ಸ್ವತ್ತನ್ನು ಖರೀದಿಸುವ ಕಾಲಕ್ಕೆ ಆರ್ ಡಿ ವಂಶವೃಕ್ಷವನ್ನು ಪರಿಶೀಲಿಸಿದ್ದೀರಾ ಎಂದರೆ ನಾನೇ ಖುದ್ದು ಬರೆಸುತ್ತಿದ್ದೇನೆಂದು ನುಡಿದಿದ್ದರು. ಜವರೇಗೌಡರಿಗೆ ವಾದಿ ಮತ್ತು 4 ಮತ್ತು 5 ನೇ ಪ್ರತಿವಾದಿಗಳು ಸಹ ಮಕ್ಕಳಿದ್ದರು ಎಂದು ದಾವಾ ಸ್ವತ್ತನ್ನು ಖರೀದಿಸುವ ಕಾಲಕ್ಕೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಾನು ಮತ್ತು ಅವರು ಒಂದೇ ಗ್ರಾಮಸ್ಥರು ಆಗಿದ್ದರಿಂದ ಅವರ ಮಕ್ಕಳ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನಗೆ ಈ ದಾವೆ ಹೂಡಿದ ನಂತರ 2 ಮತ್ತು 3 ನೇ ಪ್ರತಿವಾದಿಗಳೊಂದಿಗೆ ಸ್ನೇಹ ಭಾಂದವ್ಯ ಇದೆ ಎಂದರೆ ಸರಿಯಲ್ಲ. ನಾನೇ ನ್ಯಾಯಾಲಯಕ್ಕೆ 2 ನೇ ಪ್ರತಿವಾದಿಯನ್ನು ಕರೆದುಕೊಂಡು ಬಂದು ನನ್ನ ಪರ ಸಾಕ್ಷಿ ಹೇಳುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-13, ನಿಪಿ-14 ಮತ್ತು ನಿಪಿ-15 ರಲ್ಲಿ ನಾನು ಮತ್ತು ಶಶಿ ಇದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಇದ್ದಾರೆಂದು ನಾನು ಎಲ್ಲಿಯೂ ಹೋಗಬಾರದ ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀಸವಾಲನ್ನು ವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**